# ಶ್ರೀ ಪ್ರಸನ್ನ ಶ್ರೀನಿವಾಸದಾಸಾರ್ಯ ವಿರಚಿತರಘೂತ್ತಮತೀರ್ಥರ ಚರಿತ್ರೆ

ಶ್ರೀ ರಘೂತ್ತಮರಂಘ್ರಿ ರಾಜೀವಯುಗ್ಮದಲ್ಲಿ
ಶಿರಬಾಗಿ ಶರಣಾದೆ ಧನ್ಯನಾದೆ
ಶ್ರೀ ರಾಮಚಂದ್ರನ ಪೂರ್ಣಾನುಗ್ರಹ ಪೂರ್ಣ
ಪಾತ್ರರು ಎಮ್ಮ ಪಾಲಿಸುವ ಕರುಣಾಳು ।ಪ।

ಶ್ರೀ ಹಂಸ ಲಕ್ಷ್ಮೀಶ ಪರಮಾತ್ಮ ಸರ್ವೇಶ
ಬ್ರಹ್ಮಸನಕಾದಿಗಳ ಗುರುಪರಂಪರೆಯ
ಬ್ರಹ್ಮಪದ ಐದುವ ಶ್ರೀ ಆನಂದತೀರ್ಥರ
ನೀರುಹ ಚರಣಂಗಳಲ್ಲಿ ಶರಣಾದೆ ।೧।

ಪಂಕೇರುಹನಾಭ ನರಹರಿಮಾಧವ
ಅಕ್ಷೋಭ್ಯ ಜಯತೀರ್ಥ ವಿದ್ಯಾಧಿರಾಜ
ವಾಗ್ವಜ್ರ ರಾಜೇಂದ್ರ ಕವಿವರ ಕವೀಂದ್ರ
ವಾಗೀಶ ಶ್ರೀರಾಮಚಂದ್ರರಿಗೆ ಶರಣು ।೨।

ಶ್ರೀ ರಾಮಚಂದ್ರ ಕರಜರು ಈರ್ವರಿಗೂ
ಎರಡನೇಯವರು ವಿದ್ಯಾನಿಧಿಯ ಹಸ್ತ
ಅರವಿಂದೋತ್ಪನ್ನ ರಘುನಾಥರಿಗೆ ನಮೋ ಎಂಬೆ
ಸೂರಿವರ ರಘುವರ್ಯರಲ್ಲಿ ಶರಣಾದೆ ।೩।

ರಘುವರ್ಯ ಗುರುರಾಜ ಕರಕಮಲ ಸಂಜಾತ
ರಘೂತ್ತಮತೀರ್ಥರ ಚರಣಕಾನಮಿಪೆ
ಅಗಣಿತ ಗುಣಾಂಬುಧಿ ಅಘದೂರ ರಘುಪತಿಯ
ಹೃದ್ಗುಹಾ ಒಳಹೊರಗೆ ಕಾಂಬುವ ಧೀರ ।೪।

ರಾಮಚಂದ್ರಾಚಾರ್ಯ ನಾಮ ಬಾಲಕರು
ಬ್ರಹ್ಮಚಾರಿಯು ಧೃಡವ್ರತನು ಹರಿಭಕ್ತ
ಸುಮನೋಹರಮೂರ್ತಿ ಗುಣಗಣಾಲಂಕೃತನು
ಈ ಮಹಾವೇದಾಂತ ಪೀಠಕ್ಕೆ ಅರ್ಹ ।೫।

ತಮ್ಮ ಮಠ ಶಿಷ್ಯರಲು ಮಾಧ್ವ ಸಜ್ಜನರಲ್ಲೂ
ಸುಮಹಾ ಪಂಡಿತರು ಇರುತ್ತಿದ್ದರೂನು
ಈ ಮಹಾ ಪುರುಷ ಬಾಲನೇ ತಕ್ಕವನೆಂದು
ನೇಮಿಸಿದರು ಪೀಠಕ್ಕೆ ರಘುವರ್ಯ ಗುರುವು ।೬।

ರಘೋತ್ತಮತೀರ್ಥ ನಾಮದಿ ತುರಿಯಾಶ್ರಮ
ರಘುವರ್ಯರೀ ರಾಮಚಂದ್ರಗೆ ಇತ್ತು
ರಾಘವನ ಪೂಜಾದಿ ಸಂಸ್ಥಾನ ಅಧಿಕಾರ
ನಿಗಮಾಂತ ವಿದ್ಯಾ ಒದಗಿಸಿದರು ತೀರ್ವ ।೭।

ಚಿಕ್ಕ ಈ ಯತಿವರಗೆ ತಾವೇ ಭೋದಿಸಿ ಉಳಿದ
ಮಿಕ್ಕೆಲ್ಲ ವಿದ್ಯೆಗಳ ಕಲಿಯಬೇಕಾಗಿ
ಅಕ್ಕರದಿ ಪಾಠ ಹೇಳುವ ದೈವಿಕನನ್ನ
ರಘುವರ್ಯ ಗುರುಗಳು ನಿಯಮನ ಮಾಡಿದರು । ೮ ।

ವೇದವೇದಾಂತ ಇಚ್ಛಾಸ್ತ್ರ ಪಂಡಿತನು
ವಿದ್ಯಾರ್ಥಿ ಬಹುಮಂದಿಗೆ ಪಾಠ ಹೇಳುವ
ವಿದ್ವಾಂಸ ಓರ್ವನ್ನ ರಘುವರ್ಯತೀರ್ಥರು
ವಿದ್ಯೆ ಕಲಿಸಲು ಏರ್ಪಾಡು ಮಾಡಿದರು । ೯ ।

ಶೇಷಪ್ಪನಾಯಕರ ಮಕ್ಕಳು ಈರ್ವರಲಿ
ಜ್ಯೇಷ್ಠಪುತ್ರನು ವಿದ್ವಾಂಸರಲ್ಲಿ ಪ್ರಮುಖ
ಶಿಷ್ಯರೂ ಬಹು ಜನರು ಈತನಿಗೆ ಉಂಟು
ಭೂಷಣವೆಂದೆನೆಸಿದನು ಮಾಧ್ವ ಸಮೂಹಕ್ಕೆ । ೧೦ ।

ಸಾವಿರದ ನಾನ್ನೂರು ಎಪ್ಪತ್ತು ಒಂಭತ್ತು
ಸಂವತ್ಸರದಲಿ ಶಾಲಿವಾಹನದಿ
ದಿವಸ ತದಿಗೆ ಕೃಷ್ಣ ಜ್ಯೇಷ್ಠ ಪಿಂಗಳದಿ
ಶ್ರೀವರನಪುರಕೆ ತೆರಳಿದರು ರಘುವರ್ಯರು । ೧೧ ।

ದಯಾಳು ರಘುವರ್ಯರು ಸಮಾಧಿಸ್ಥರಾಗಲು
ಬಾಲ್ಯಾವಸ್ಥೆಯಲ್ಲಿ ಇದ್ದ ರಘೂತ್ತಮರು
ವಿದ್ಯಾವ್ಯಾಸಂಗ ಗುರು ನಿಯಮನದಂತೆಯೇ
ಗೈಯಲು ಪೋದರು ಆ ವಿದ್ವಾಂಸನಲ್ಲಿ । ೧೨ ।

ಮಣೂರು ಎಂದು ಹೆಸರುಳ್ಳ ಆ ಊರಲ್ಲಿ
ಘನ ವಿದ್ವನ್ಮಣಿಯಲ್ಲಿ ಕಲಿಯುವಾಗ
ಧನವಂತ ಊರು ನಾಯಕ ರಘೂತ್ತಮರಲ್ಲಿ
ಬಿನ್ನೈಸಿದ ಭೋಜನಕೆ ಬರಬೇಕೆಂದು । ೧೩ ।

ಸ್ವಾಮಿಗಳಿಗೆ ಪಾಠ ಹೇಳುವ ವಿಪ್ರನೂ
ಆ ಮನೆಯಲ್ಲಿ ಊಟಕ್ಕೆ ಬಂದಿದ್ದ ।
ನೇಮ ಆಹ್ನಿಕ ಮುಗಿಸಿ ಗುರುಗಳು ಬರಲಿಕ್ಕೆ
ತಾಮಸವಾಯಿತು ವಿಲಂಬವು ಸ್ವಲ್ಪ । ೧೪ ।

ಸ್ವಾಮಿಗಳ ಬಾಲ್ಯತ್ವ ವಿದ್ಯಾರ್ಥಿತ್ವವು
ಆ ಮನೆ ಗೃಹಸ್ಥನನ್ನೂ ವಿಪ್ರನನ್ನೂ ಮೋಹಿಸಿತು ।
ತಮ್ಮ ಯೋಗ್ಯತೆ ಸ್ಥಾನ ಮರೆತು ಗರ್ವದಿ ವಿಪ್ರ
ಸ್ವಾಮಿಗಳ ಲೆಕ್ಕಿಸದೆ ಕುಳಿತನು ಭೋಜನಕೆ । ೧೫ ।

ಅಂದು ರಾತ್ರಿ ಸ್ವಪ್ನದಲ್ಲಿ ರಘುವರ್ಯ ಗುರುಗಳು
ಬಂದು ಪೇಳಿದರು ತಮ್ಮ ಪ್ರಿಯಶಿಷ್ಯರಿಗೆ
ಇಂದಿನಾರಭ್ಯ ಪಾಠವು ನಿಲಿಸು ವಿಪ್ರನಲಿ
ಕುಂದಿಲ್ಲದೆ ಪಾಠ ಹೇಳುವಿ ನೀವೇವೇ ।೧೬।

ಈ ರೀತಿ ಸ್ವಪ್ನವು ಆಗಿ ರಘೋತ್ತಮರು
ವಿಪ್ರನಲ್ಲಿ ಪಾಠಕ್ಕೆ ಪೋಗುವುದು ತೊರೆದು
ಆ ಪಂಡಿತವರ್ಯಗಿಂತ ಉತ್ತಮ ರೀತಿ
ತಾಪೇಳಿದರು ಪಾಠ ಮಠದಿ ಶಿಷ್ಯರಿಗೆ ।೧೭।

ಗುರುಗಳಲಿ ಹರಿ ಇಪ್ಪ ಗುರುದ್ವಾರ ಒಲಿವನು
ಗುರು ಅನುಗ್ರಹ ಇದ್ದರೇ ಹರಿ ಅನುಗ್ರಹ
ಗುರು ಪ್ರಸಾದವ ಪಡೆದ ಶ್ರೀ ರಘೋತ್ತಮರಿಗೆ
ಶಾಸ್ತ್ರ ಜ್ಞಾನವು ಪ್ರಜ್ವಲಿಸಿತು ಪೂರ್ಣದಲಿ ।೧೮।

ಜಾತಾಪರೋಕ್ಷಿಗಳು ದೇವತಾಂಶರಿಗೇವೆ
ಜ್ಞಾತವಾಗುವ ಪದ ವಾಕ್ಯವ ತಾತ್ಪರ್ಯ
ಈ ದೇವತಾಂಶ ಶ್ರೀ ರಘೋತ್ತಮ ಗುರುವರರು
ಸಂದೇಹವಿಲ್ಲದೆ ತಿಳಿದು ಭೋಧಿಸಿದರು ।೧೯।

ತನ್ನಲ್ಲಿ ವ್ಯಾಸಂಗ ಪೂರೈಸಿದ ಬಾಲ
ಏನು ಪಾಠವ ಹೇಳೆ ಶಕ್ತನೆಂದರಿಯೆ
ಕಾಣದೆ ಮರೆಯಾಗಿ ನಿಂತು ಆ ವಿಪ್ರ
ಶ್ರವಣ ಮಾಡಿದ ಗುರುಗಳು ಬೋಧಿಸುವುದು ।೨೦।

ಸಂದಿಗ್ಧವಾಗಿ ತನ್ನಗಿದ್ದ ವಿಷಯಗಳನ್ನೂ
ಅದ್ಭುತ ರೀತಿಯಲ್ಲಿ ಅನಾಯಾಸವಾಗಿ
ಅತಿವಿಶದಿ ರಘೂತ್ತಮರು ಪೇಳಲು ಕೇಳಿ
ಬಂದು ಮುಂದೆ ನಿಂತು ನಮಿಸಿದನು ವಿಪ್ರ ।೨೧।

ತಾನು ಮಾಡಿದ ಉದಾಸೀನ ಅಪರಾಧಗಳ
ಘನ ದಯದಿ ಕ್ಷಮಿಸಬೇಕೆಂದು ಬೇಡುತ್ತ
ತನು ದಂಡವತ್ ಭುವಿಯಲ್ಲಿ ಬಿದ್ದು ನಮಿಸಿದನು
ದೀನದಯಾಳು ಗುರು ಅಭಯ ನೀಡಿದರು ।೨೨॥

ದಿಗ್ವಿಜಯ ಮಾಡುತ್ತ ಅಲ್ಲಲ್ಲಿ ದುರ್ಮತ
ದುರ್ವಾದಿಗಳನ್ನು ಖಂಡಿಸಿ ಸಿದ್ಧಾಂತ
ತತ್ವ ಬೋಧಿಸಿ ಜಗತ್ ಪ್ರಖ್ಯಾತರಾದರು
ಶಾಶ್ವತ ನಿಜಸುಖ ಮಾರ್ಗದರ್ಶಕರು ।೨೩।

ರಘುವರ್ಯ ಗುರುಗಳು ನೇರ ಸ್ವಪ್ನದಲಿ
ರಘೂತ್ತಮರಿಗೆ ಪೇಳಿದ ಪ್ರಕಾರ
ದಿಗ್ವಿಜಯ ಸಮಯದಿ ಸಂಸ್ಥಾನಕೆ ಭೂಷಣ
ಬಗೆ ಬಗೆ ವಸ್ತು ಪರಿವಾರ ಸೇರಿಸಿದರು ।೨೪।

ವೇದಾಂತ ಸಾಮ್ರಾಜ್ಯ ರಾಜಗುರುರಾಜರು
ಹಸ್ತಿಘೋಟಕ ಕೊಂಬು ವಾದ್ಯಮೇಳಗಳು
ಸುತ್ತಲೂ ವಿದ್ವಜ್ಜನ ವೇದಘೋಷದ ಮಧ್ಯ
ಮುತ್ತು ಪಲ್ಲಕ್ಕಿಯೊಳು ಕುಳಿತರು ದೇವರ ಸಹ ।೨೫।

ಪೋದ ಕಡೆಗಳಲಿ ದಿಗ್ವಿಜಯ ರಾಮಾರ್ಚನೆ
ವಿದ್ವಜ್ಜನ ಸಭೆ ವಾಕ್ಯಾರ್ಥ ಪಾಠ
ಸಿದ್ಧಾಂತ ಸ್ಥಾಪನೆ ದುರ್ಮತ ನಿರಾಸವು
ಸಾಧು ಸಜ್ಜನರ ಉದ್ಧಾರ ಪ್ರತಿದಿನವು ।೨೬।

ಬಾದರಾಯಣ ನಿರ್ಣೀತ ರೀತಿಯಲಿ
ಮಧ್ವರಾಯರು ಬರೆದ ಗ್ರಂಥಗಳಿಗೆ
ಅದ್ಭುತ ಟೀಕೆ ಜಯತೀರ್ಥರು ಮಾಡಿದರು
ತದ್ಭಾವ ಬೋಧವು ರಘೂತ್ತಮರ ರಚನೆ ।೨೭।

ಟೀಕಾ ಭಾವಭೋಧರು ಎಂದು ಪ್ರಖ್ಯಾತ
ರಘೂತ್ತಮರ ಎಲ್ಲೆಲ್ಲು ವಿದ್ವಜ್ಜನರು
ನಗರ ಪಟ್ಟಣ ಗ್ರಾಮ ನಾಯಕರು ಪ್ರಮುಖರು
ಸ್ವಾಗತ ಅರ್ಪಿಸಿ ಪೂಜಿಸಿದರು ಮುದದಿ । ೨೮ ।

ಪುಟ್ಟದಾರಭ್ಯ ಹರಿಪಾದ ಕಮಲದಿ ಮನ
ಇಟ್ಟು ರಘುವರ್ಯರು ಕೊಟ್ಟ ಸಂಸ್ಥಾನ
ಪಟ್ಟ ಆಳಿ ಸರ್ವೋತ್ತಮನನ್ನ ಸೇವಿಸಿ
ಶ್ರೇಷ್ಠತಮ ಸುಖಪ್ರದ ಮಾರ್ಗ ತೋರಿಹರು । ೨೯ ।

ಹದಿನೈದು ನೂರು ಹದಿನೇಳು ಶಕಮನ್ಮಥ
ಶುದ್ಧ ಏಕಾದಶಿ ಪೌಷ್ಯದಲಿ ಹರಿಯ
ಪಾದ ಸೇರಿದರು ಸಂಸ್ಥಾನ ಆಡಳಿತ
ವೇದವ್ಯಾಸತೀರ್ಥರು ಮಾಡಲಿಕೆ ಬಿಟ್ಟು । ೩೦ ।

ಮತ್ತೊಂದು ಅಂಶದಲಿ ವೃಂದಾವನದೊಳು
ಹತ್ತಾವತಾರ ಹರಿ ಧ್ಯಾನಪರರಿಹರು ।
ಭಕ್ತರು ಅಲ್ಲಲ್ಲಿ ಅರ್ಚಿಸಿ ಸೇವಿಸುವ
ಮೃತ್ತಿಕೆಯಲ್ಲೂ ಸಹ ಇದ್ದು ಪಾಲಿಪರು । ೩೧ ।

ವೃಂದಾವನ ತಿರುಕೋಯಿಲೂರು ಮಣಂಪೊಂಡಿ
ಎಂದು ಕರೆಯಲ್ಪಡುವ ಗ್ರಾಮದಲಿ ಇಹುದು ।
ಇಂದುಶೇಖರ ಚಾಪದಿಂದ ಉದಿಸಿದ ಪುಣ್ಯ
ನದಿಯು ಹರಿಯುತ್ತೆ ಮಜ್ಜನವು ಅಘಹರವು । ೩೨ ।

ಮಂದಜಾಸನ ಮೊದಲಾದ ಸುರವೃಂದ
ವಂದಿತ ರಮಾಪತಿಯು ರಘೂತ್ತಮಾಂತಸ್ಥ ।
ವೃಂದಾವನದಿ ಗುರು ಹರಿಭಕ್ತಿ ಪೂರ್ವಕದಿ
ಬಂದು ಸೇವಿಪರಿಗೆ ವಾಂಛಿತಗಳೀವ । ೩೩ ।

ಗಾಳಿ ಬಿಸಿಲು ಮಳೆ ಮಂಜುಗಳ ಲೆಕ್ಕಿಸದೆ
ಮಾಲೋಲನ ಧ್ಯಾನಿಸುತ ವೃಂದಾವನದೊಳು ।
ಕುಳಿತಿಹರು ಪರಮ ಕಾರುಣಿಕ ಈ ಗುರುಗಳು
ಪಾಲಿಸುತಿಹರು ಎಮ್ಮ ಅನುಗಾಲದಯದಿ । ೩೪ ।

ವೃಂದಾವನ ದರ್ಶನ ತೀರ್ಥ ನಮಸ್ಕಾರ
ಪ್ರದಕ್ಷಿಣೆ ಅರ್ಚನೆ ಹಸ್ತೋದಕ
ವಂದನೆ ಸೇವಾದಿಗಳ ಮಾಳ್ಪ ಸಜ್ಜನರ
ಕುಂದು ಕೊರತೆಗಳಳಿವ ಇಷ್ಟಾರ್ಥಪ್ರದರು । ೩೫ ।

ಪಿಲ್ಲಿ ಶೂನ್ಯಾದಿ ವಾಮಾಚಾರ ಪೀಡೆಗಳು
ಗಾಳಿ ದುಷ್ಟಗ್ರಹ ಪೈಶಾಚಾದಿಗಳು
ಕಳವಳಿಕೆ ಬುದ್ಧಿಭ್ರಮ ವ್ಯಾಧಿದಾರಿದ್ರ್ಯಾದಿ
ಎಲ್ಲ ದೋಷಗಳನ್ನ ಪರಿಹರಿಸುವರು । ೩೬ ।

ಸವೈರಾಗ್ಯ ಜ್ಞಾನವು ಭಕುತಿ ಅಪರೋಕ್ಷ್ಯವ
ಸೇವಿಪ ಯೋಗ್ಯರಿಗೆ ಒದಗಿಸಿ ಉದ್ಧರಿಸಿ
ಸರ್ವವಿಧದಲು ಭಾಗ್ಯ ಆಯುಷ್ಯ ಆರೋಗ್ಯ
ಈವರು ಭಕ್ತಿಯಲಿ ಸ್ಮರಿಸಿ ವಂದಿಪರ್ಗೆ । ೩೭ ।

ಉತ್ತಮ ತರಗತಿ ದೇವತಾಂಶರು ಇವರು
ಮಧ್ವಮತದುಗ್ಧಾಬ್ಧಿ ಪೂರ್ಣ ಚಂದ್ರ
ಹತ್ತು ತಿಂಗಳು ಹೊತ್ತು ಹೆತ್ತ ಉತ್ತಮ ಸಾಧ್ವಿ
ಮಾತೆಯ ಭಾಗ್ಯ ಏನೆಂಬೆ ಇಂಥವರ । ೩೮ ।

ಸೂರಿಸುರವರ ಶ್ರೀ ರಘೂತ್ತಮರ ಚರಣದಲಿ
ಶರಣಾದೆ ಎನ್ನಯ ಎನ್ನ ಸೇರಿದವರ
ಪರಿಪರಿ ಪೀಡೆಗಳ ಪಾಪಗಳ ಅಳಿದು
ಕಾರುಣ್ಯ ಔದಾರ್ಯದಿ ಪಾಲಿಸುವರು । ೩೯ ।

ಸರಿದ್ವರ ಪಿನಾಕಿನಿಯಲ್ಲಿ ಕೇಶವ ಜಗವ
ಈರಡಿಯಲಿ ಅಳೆದ ತ್ರಿವಿಕ್ರಮನು ಶಿರಿಯು
ಇರುತಿಹರು ಹನುಮ ಶಿವಷ್ಕಂದ ತೀರಗಳಲಿ
ಶರಣೆಂಬೆ ಇವರೆಲ್ಲರಿಗೆ ಶ್ರೀ ರಘೋತ್ತಮರಿಗೂ । ೪೦ ।

ಕಮಲಭವಪಿತ ಶ್ರೀ ಪ್ರಸನ್ನ ಶ್ರೀನಿವಾಸ
ಕಮಲಾಯುತ ವಿಶ್ವರೂಪ ತ್ರಿವಿಕ್ರಮನಿಗೆ
ಭೀಮ ಶಿವಸ್ಕಂಧರಿಗೆ ಪ್ರಿಯತಮ ರಘೂತ್ತಮರಿಗೆ
ಈ ಮಂಗಳ ಚರಿತ ಶ್ರೀ ಕೃಷ್ಣಾರ್ಪಿತವು । ೪೧ ।

॥ ಇತಿ ಶ್ರೀ ಪ್ರಸನ್ನ ಶ್ರೀನಿವಾಸಾರ್ಯ ವಿರಚಿತ
ಶ್ರೀ ರಘೂತ್ತಮತೀರ್ಥರ ಚರಿತ್ರಂ ಸಂಪೂರ್ಣಂ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥